# ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ

**ಸಿಸಿ ನಂ ಃ 2389/2023**

**ಸಿಡಬ್ಲ್ಯು ಃ 11**

**ಪಿಡಬ್ಲ್ಯು ಃ 4**

**ಹೆಸರು** ಃ ರಾಯಪ್ಪ ಭೀಮಪ್ಪ ಸಂಬಳಗಿ

**ವಯಾ** ಃ 32 ವರ್ಷ

**ಉದ್ಯೋಗ** ಃ ಒಕ್ಕಲುತನ

**ವಾಸ** ಃ ಇಂಗಳಿ ತಾಃ ಹುಕ್ಕೇರಿ

**(ದಿನಾಂಕಃ 16-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)**

**ಮುಖ್ಯ ವಿಚಾರಣೆ : ಸಸಅಃರವರಿಂದ ಸರಕಾರದ ಪರವಾಗಿ ಃ**

ಮೃತ ಸಿದ್ದಪ್ಪ ನಮ್ಮ ಚಿಕ್ಕಪ್ಪ . ಚಾಸಾ-1 ಅವರ ಮಗ . ಸುಮಾರು 2-3 ವರ್ಷಗಳ ಹಿಂದೆ ನಮ್ಮ ಊರಿನಲ್ಲಿ ಹನುಮಂತ ದೇವರ ಜಾತ್ರೆ ಕುದುರೆ ಶರತ್ತು ನೋಡಲು ಬಹಳಷ್ಟು ಜನ ಸೇರಿದ್ದಾಗ ಅಲ್ಲಿ ನನ್ನ ಚಿಕ್ಕಪ್ಪ ಸಹ ಹೋಗಿದ್ದರು. ನಾನು ಅಲ್ಲಿ ಇರಲಿಲ್ಲ . ಸಿದ್ದಪ್ಪನಿಗೆ ಯಾವುದೇ ಗಾಡಿ ಬಂದು ಡಿಕ್ಕಿ ಹೊಡೆದಿದೆ ಎಂದು ಹೇಳಿ ಆತನನ್ನು ಘಟಪ್ರಭಾಗದ ಜೆ ಜೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ವಿಜಯ ಆಸ್ಪತ್ರೆ ಬೆಳಗಾವಿಗೆ ಕರೆದುಕೊಂಡು ಹೋದರು. ಸಿದ್ದಪ್ಪ 2 ದಿನಗಳ ನಂತರ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿ ಆಗದೇ ತೀರಿಕೊಂಡರು. ಅಪಘಾತವಾದ ನಂತರ ಆಸ್ಪತ್ರೆಗೆ ಹೋಗಿದ್ದು ನಂತರ ಅದರ ಮಾರನೆ ದಿನ ನಾನು ಮತ್ತು ಚಾಸಾ-1 ಪೋಲಿಸ ಠಾಣೆಗೆ ಹೋಗಿದ್ದೆವು. ನಮ್ಮ ಜೊತೆಗೆ ಪೋಲಿಸ ಠಾಣೆಗೆ ಸಂತೋಷ ಸಂಬಳಗಿ , ಮಲ್ಲೇಶ ಗುಜನಾಳ , ಗಂಗಾಧರ ಗೂಳಪ್ಪಗೋಳ ಬಂದಿದ್ದರು. ನಾನು ಅಲ್ಲಿ ಪೋಲಿಸರು ಹೇಳಿದ ಮೇರೆಗೆ ದೂರು ಬರೆದೆ. ಸದರಿ ದೂರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿ.ಪಿ-1 ಎಂದದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ-1(ಬಿ) ಎಂದು ಗುರುತಿಸಲಾಯಿತು. ಅದರಲ್ಲಿ (ಏನು ಬರೆದಿದ್ದೇನೆ ಎಂದು ರಾಗ ನನಗೆ ನೆನಪಿಲ್ಲ.

**( ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ವಾಟೀ ಸವಾಲು ಮಾಡಲು, ಸಸಅ ರವರು ಮನವಿ ಮಾಡಿರುತ್ತಾರೆ. ಸದ್ರಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷಿ**

**ನುಡಿದಿದ್ದರಿಂದ, ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

**ಪಾಟಿ ಸವಾಲುಃ** ಸರಕಾರಿ ಸಹಾಯಕ ಅಭಿಯೋಜಕರಿಂದ -

ದಿನಾಂಕ **07-04-2023** ರಂದು ನಮ್ಮ ಊರಿನಲ್ಲಿ ಹನುಮಂತ ದೇವರ ಜಾತ್ರೆಯ ಕಾರಣ ನನ್ನ ಕಾಕಾ ಸಿದ್ದಪ್ಪ ಹಾಗೂ ನಮ್ಮ ಊರಿನ ಗಂಗಾಧರ , ಮಲ್ಲೇಶ ಎಲ್ಲರೂ ಕೂಡಿ ಇಂಗಳಿ ಹೊಸೂರು ರೋಡಿನಲ್ಲಿ ರಸ್ತೆ ಬಿಟ್ಟು ದಂಡೆಯಲ್ಲಿ ನಿಂತು ಕುದುರೆ ಶರತ್ತು ನೋಡುತ್ತಿದ್ದಾಗ ಒಬ್ಬ ಮೋಟಾರ ಸೈಕಲ ಚಾಲಕ ಹೊಸೂರು ಕಡೆಯಿಂದ ಇಂಗಳಿ ಕಡೆಗೆ ಅತಿ ವೇಗ ಮತ್ತು ಅಜಾಗೃಕತೆಯಿಂದ ಬಂದು ರಸ್ತೆ ಬದಿಯಲ್ಲಿ ನಿಂತಿದ್ದ ಚಾಸಾ-**1** ರವರ ತಂದೆ ಸಿದ್ದಪ್ಪ ಸಂಬಳಗಿ ಇವರಿಗೆ ಡಿಕ್ಕಿ ಹೊಡಿಸಿದ ಹಾಗೂ ಮಲ್ಲೇಶಿ ಮತ್ತು ಗಂಗಾಧರ ಇಬ್ಬರೂ ಸೇರಿ ಸಿದ್ದಪ್ಪನನ್ನು ಎಬ್ಬಿಸಿ ನೋಡಿದಾಗ ಆತನ ಬೆನ್ನಿಗೆ ಭಾರಿ ಪೆಟ್ಟಾಗಿತ್ತು , ಆತನಿಗೆ ನಿಂದ್ರಲು ಮತ್ತು ಕೂಡ್ರಿಲು ಬರುತ್ತಿರಲಿಲ್ಲ, ಬಾಯಿಯಿಂದ ರಕ್ತ ಬರುತಿತ್ತಿತ್ತು ಹಾಗೂ ಸದರಿ ಮೋಟಾರ ಸೈಕಲ ನಂ. ಕೆಎ **22** ಇಎಫ್ **4102** ಇದ್ದು ಅದನ್ನು ಹೊಡೆಯುತ್ತಿದ್ದವನಿಗೆ ಮುಖಕ್ಕೆ ಪೆಟ್ಟಾಗಿತ್ತು ಹಾಗೂ ಹಿಂದೆ ಕುಳಿತವನಿಗೆ ಯಾವುದೇ ಪೆಟ್ಟಾಗಿರಲಿಲ್ಲ ಹಾಗೂ ಅವರು ಅಪಘಾತ ಪಡಿಸಿ ಗಾಡಿ ಬಿಟ್ಟು ಓಡಿ ಹೋದರು ಎಂಬ ವಿಚಾರವನ್ನು ನಾನು ಚಾಸಾ-**1** ಹೇಳಿದಂತೆ ದೂರನ್ನು ಬರೆದು ಯಮಕನಮರಡಿ ಪೋಲಿಸರಿಗೆ ಕೊಟ್ಟಿದ್ದೆ ಎಂದರೆ ಸಾಕ್ಷಿ ಪೋಲಿಸರು ಹೇಳಿದ ಮೇರೆಗೆ ನಾನು ದೂರನ್ನು ಬರೆದೆ ಎಂದು ಹೇಳುತ್ತಾರೆ. ಈ ಬಗ್ಗೆ ನಾನು ಪೋಲಿಸರಿಗೆ ನಾನು ಹೇಳಿಕೆಯನ್ನೂ ಸಹ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಸದ್ರಿ ಸಾಕ್ಷಿಗೆ ಸರಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯ ಹೇಳಿಕೆ ಭಾಗವನ್ನು ಓದಿ ಹೇಳಿದ್ದು, ಸದ್ರಿ ಸಾಕ್ಷಿಯು ಆ ಹೇಳಿಕೆಯನ್ನು ಪೋಲಿಸರ ಮುಂದೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಸದ್ರಿ ಸಾಕ್ಷಿ ಒಪ್ಪದ ಹೇಳಿಕೆಯ ಭಾಗವಾದ " ಮೊನ್ನೆ ದಿನಾಂಕ **74-2023** ................... ದಸ್ತೂರ ಎಂದು ಸಹಿ ಮಾಡಿರುತ್ತೇನೆ" ನ್ನು ನಿ.ಪಿ-**15** ಎಂದು ಗುರುತಿಸಲಾಯಿತು. ನಾನು ದಿನಾಂಕ **21-4-2023** ರಂದು ಪೋಲಿಸರ ಮುಂದೆ ಪುನಃ ಹೇಳಿಕೆ ನೀಡಿ ಪೋಲಿಸ ಠಾಣಯಲ್ಲಿ ಅಪಘಾತ ಪಡಿಸಿದಂತಹ ಅರ್ಬನ ರಾಮಪ್ಪ ವಂಟಮೂರಿ ಹಾಗೂ ಮುತ್ತಪ್ಪ ಕಾಡಪ್ಪ ಗಸ್ತಿ ಇವರನ್ನು ನೋಡಿ ಚಾಸಾ-**6** ಮತ್ತು **7** ನಮ್ಮ ಸಮಕ್ಷಮ ಗುರುತು

ಹಿಡಿದಿದ್ದರು ಎಂದರೆ ಸರಿಯಲ್ಲ. ಎಲ್ಲ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ** ಆರೋಪಿ ಪರ ಶ್ರೀ ಎಸ್ ಎನ್ ಡಿ ವಕೀಲರಿಂದ -

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**

<u>**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ**</u>

**ಸಿಸಿ ನಂ ಃ 2389/2023**

**ಸಿಡಬ್ಲ್ಯು ಃ 7**

**ಪಿಡಬ್ಲ್ಯು ಃ 3**

**ಹೆಸರು** ಃ ಮಲ್ಲೇಶ ಕೆಂಚಪ್ಪ ಗುಜನಾಳ

**ವಯಾ** ಃ **48** ವರ್ಷ

**ಉದ್ಯೋಗ** ಃ ಒಕ್ಕಲುತನ

**ವಾಸ** ಃ ಇಂಗಳಿ ತಾಃ ಹುಕ್ಕೇರಿ

**(ದಿನಾಂಕಃ 16-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು)**

<u>**ಮುಖ್ಯ ವಿಚಾರಣೆ : ಸಸಅಃರವರಿಂದ ಸರಕಾರದ ಪರವಾಗಿ ಃ**</u>

ಮೃತ ಸಿದ್ದಪ್ಪ ನಮ್ಮ ಊರಿನವರು. ಸುಮಾರು **2-3** ವರ್ಷಗಳ ಹಿಂದೆ ನಮ್ಮ ಊರಿನಲ್ಲಿ ಹನುಮಂತ ದೇವರ ಜಾತ್ರೆ ಕುದುರೆ ಶರತ್ತು ನೋಡಲು ಬಹಳಷ್ಟು ಜನ ಸೇರಿದ್ದರು, ನಾನೂ ಸಹ ಹೊಲದಿಂದ ಅಲ್ಲಿಗೆ ಹೋದೆ. ಅಲ್ಲಿ ನಾನು ಹೋಗುವ ಮುಂಚೆ ಅಪಘಾತ ಆಗಿತ್ತು . ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ , ನನಗೆ ಬೇರೆ ವಿಚಾರ ಗೊತ್ತಿಲ್ಲ.

**( ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು, ಸಸಅ ರವರು ಮನವಿ ಮಾಡಿರುತ್ತಾರೆ. ಸದ್ರಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದರಿಂದ, ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

<u>**ಪಾಟಿ ಸವಾಲುಃ** ಸರಕಾರಿ ಸಹಾಯಕ ಅಭಿಯೋಜಕರಿಂದ -</u>

ದಿನಾಂಕ **07-04-2023** ರಂದು ನಮ್ಮ ಊರಿನಲ್ಲಿ ಹನುಮಂತ ದೇವರ ಜಾತ್ರೆಯ ಕಾರಣ ನಾನು ಮತ್ತು ನಮ್ಮ ಊರಿನ ಗಂಗಾಧರ , ಸಿದ್ದಪ್ಪ ಎಲ್ಲರೂ ಕೂಡಿ ಇಂಗಳಿ ಹೊಸೂರು ರೋಡಿನಲ್ಲಿ ರಸ್ತೆ ಬಿಟ್ಟು ದಂಡೆಯಲ್ಲಿ ನಿಂತಿದ್ದಾಗ ಒಬ್ಬ ಮೋಟಾರ ಸೈಕಲ ಚಾಲಕ ಹೊಸೂರು ಕಡೆಯಿಂದ ಇಂಗಳಿ ಕಡೆಗೆ ಅತಿ ವೇಗ ಮತ್ತು ಅಜಾಗೃಕತೆಯಿಂದ ಬಂದು ರಸ್ತೆ ಬದಿಯಲ್ಲಿ ನಿಂತಿದ್ದ ಚಾಸಾ-**1** ರವರ ತಂದೆ ಸಿದ್ದಪ್ಪ ಸಂಬಳಗಿ ಇವರಿಗೆ ಡಿಕ್ಕಿ ಹೊಡಿಸಿದ ಎಂದರೆ ನನಗೆ ಗೊತ್ತಿಲ್ಲ. ಆಗ ನಾನು ಮತ್ತು ಗಂಗಾಧರ ಇಬ್ಬರೂ ಸೇರಿ ಸಿದ್ದಪ್ಪನನ್ನು ಎಬ್ಬಿಸಿ ನೋಡಿದಾಗ ಆತನ ಬೆನ್ನಿಗೆ ಭಾರಿ ಪೆಟ್ಟಾಗಿತ್ತು , ಆತನಿಗೆ ನಿಂದ್ರಲು ಮತ್ತು ಕೂಡ್ರಲು ಬರುತ್ತಿರಲಿಲ್ಲ .

ಹಾಗೂ ಬಾಯಿಯಿಂದ ರಕ್ತ ಬರುತಿತ್ತಿತ್ತು ಎಂದರೆ ಸರಿಯಲ್ಲ. ಸದರಿ ಮೋಟಾರ ಸೈಕಲ ನಂ. ಕೆಎ 22 ಇಎಫ್ 4102 ಇದ್ದು ಅದನ್ನು ಹೊಡೆಯುತ್ತಿದ್ದವನಿಗೆ ಮುಖಕ್ಕೆ ಪೆಟ್ಟಾಗಿತ್ತು ಹಾಗೂ ಹಿಂದೆ ಕುಳಿತವನಿಗೆ ಯಾವುದೇ ಪೆಟ್ಟಾಗಿರಲಿಲ್ಲ ಹಾಗೂ ಅವರು ಅಪಘಾತ ಪಡಿಸಿ ಗಾಡಿ ಬಿಟ್ಟು ಓಡಿ ಹೋದರು ಎಂದರೆ ಸರಿಯಲ್ಲ.

ಸದ್ರಿ ಸಾಕ್ಷಿಗೆ ಸರಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯ ಹೇಳಿಕೆ ಭಾಗವನ್ನು ಓದಿ ಹೇಳಿದ್ದು, ಸದ್ರಿ ಸಾಕ್ಷಿಯು ಆ ಹೇಳಿಕೆಯನ್ನು ಪೋಲಿಸರ ಮುಂದೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಸದ್ರಿ ಸಾಕ್ಷಿ ಒಪ್ಪದ ಹೇಳಿಕೆಯ ಭಾಗವಾದ " ಮೊನ್ನೆ ದಿನಾಂಕ 74-2023 .................. ತಿಳಿಯಿತು" ನ್ನು ನಿ.ಪಿ-14 ಎಂದು ಗುರುತಿಸಲಾಯಿತು. ನಾನು ದಿನಾಂಕ 21-4-2023 ರಂದು ಪೋಲಿಸರ ಮುಂದೆ ಪುನಃ ಹೇಳಿಕೆ ನೀಡಿ ಪೋಲಿಸ ಠಾಣಯಲ್ಲಿ ಅಪಘಾತ ಪಡಿಸಿದಂತಹ ಅರ್ಬನ ರಾಮಪ್ಪ ವಂಟಮೂರಿ ಹಾಗೂ ಮುತ್ತಪ್ಪ ಕಾಡಪ್ಪ ಗಸ್ತಿ ಇವರನ್ನು ನೋಡಿ ಗುರುತು ಹಿಡಿದಿದ್ದೆ ಎಂದರೆ ಸರಿಯಲ್ಲ. ಎಲ್ಲ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಎಸ್ ಎನ್ ಡಿ ವಕೀಲರಿಂದ -**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ**

**ಸಿಸಿ ನಂ ಃ 2389/2023**

**ಸಿಡಬ್ಲ್ಯು ಃ 6**

**ಪಿಡಬ್ಲ್ಯು ಃ 2**

**ಹೆಸರು** ಃ ಗಂಗಾಧರ ಗೂಳಪ್ಪ ಗೂಳೆಪ್ಪಗೋಳ

**ವಯಾ** ಃ 53 ವರ್ಷ

**ಉದ್ಯೋಗ** ಃ ಒಕ್ಕಲುತನ

**ವಾಸ** ಃ ಇಂಗಳಿ ತಾಃ ಹುಕ್ಕೇರಿ

**(ದಿನಾಂಕಃ 16-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು)**

**ಮುಖ್ಯ ವಿಚಾರಣೆ : ಸಸಅಃರವರಿಂದ ಸರಕಾರದ ಪರವಾಗಿ ಃ**

ಮೃತ ಸಿದ್ದಪ್ಪ ನಮ್ಮ ಊರಿನವರು. ಸುಮಾರು 2-3 ವರ್ಷಗಳ ಹಿಂದೆ ನಮ್ಮ ಊರಿನಲ್ಲಿ ಹನುಮಂತ ದೇವರ ಜಾತ್ರೆ ಕುದುರೆ ಶರತ್ತು ನೋಡಲು ಬಹಳಷ್ಟು ಜನ ಸೇರಿದ್ದರು, ನಾನೂ ಸಹ ಹೊಲದಿಂದ ಅಲ್ಲಿಗೆ ಹೋದೆ. ಅಲ್ಲಿ ನಾನು ಹೋಗುವ ಮುಂಚೆ ಅಪಘಾತ ಆಗಿತ್ತು . ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ , ನನಗೆ ಬೇರೆ ವಿಚಾರ ಗೊತ್ತಿಲ್ಲ.

**( ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು, ಸಸಅ ರವರು ಮನವಿ ಮಾಡಿರುತ್ತಾರೆ. ಸದ್ರಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದರಿಂದ, ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

**ಪಾಟಿ ಸವಾಲುಃ** ಸರಕಾರಿ ಸಹಾಯಕ ಅಭಿಯೋಜಕರಿಂದ -

ದಿನಾಂಕ 07-04-2023 ರಂದು ನಮ್ಮ ಊರಿನಲ್ಲಿ ಹನುಮಂತ ದೇವರ ಜಾತ್ರೆಯ ಕಾರಣ ನಾನು ಮತ್ತು ನಮ್ಮ ಊರಿನ ಮಲ್ಲೇಶಿ , ಸಿದ್ದಪ್ಪ ಎಲ್ಲರೂ ಕೂಡಿ ಇಂಗಳಿ ಹೊಸೂರು ರೋಡಿನಲ್ಲಿ ರಸ್ತೆ ಬಿಟ್ಟು ದಂಡೆಯಲ್ಲಿ ನಿಂತಿದ್ದಾಗ ಒಬ್ಬ ಮೋಟಾರ ಸೈಕಲ ಚಾಲಕ ಹೊಸೂರು ಕಡೆಯಿಂದ ಇಂಗಳಿ ಕಡೆಗೆ ಅತಿ ವೇಗ ಮತ್ತು ಅಜಾಗೃಕತೆಯಿಂದ ಬಂದು ರಸ್ತೆ ಬದಿಯಲ್ಲಿ ನಿಂತಿದ್ದ ಚಾಸಾ-1 ರವರ ತಂದೆ ಸಿದ್ದಪ್ಪ ಸಂಬಳಗಿ ಇವರಿಗೆ ಡಿಕ್ಕಿ ಹೊಡಿಸಿದ ಎಂದರೆ ನನಗೆ ಗೊತ್ತಿಲ್ಲ. ಆಗ ನಾನು ಮತ್ತು ಮಲ್ಲೇಶಿ ಇಬ್ಬರೂ ಸೇರಿ ಸಿದ್ದಪ್ಪನನ್ನು ಎಬ್ಬಿಸಿ ನೋಡಿದಾಗ ಆತನ ಬೆನ್ನಿಗೆ ಭಾರಿ ಪೆಟ್ಟಾಗಿತ್ತು , ಆತನಿಗೆ ನಿಂದ್ರಲು ಮತ್ತು ಕೂಡ್ರಲು ಬರುತ್ತಿರಲಿಲ್ಲ .

ಹಾಗೂ ಬಾಯಿಯಿಂದ ರಕ್ತ ಬರುತಿತ್ತಿತ್ತು ಎಂದರೆ ಸರಿಯಲ್ಲ. ಸದರಿ ಮೋಟಾರ ಸೈಕಲ ನಂ. ಕೆಎ 22 ಇಎಫ್ 4102 ಇದ್ದು ಅದನ್ನು ಹೊಡೆಯುತ್ತಿದ್ದವನಿಗೆ ಮುಖಕ್ಕೆ ಪೆಟ್ಟಾಗಿತ್ತು ಹಾಗೂ ಹಿಂದೆ ಕುಳಿತವನಿಗೆ ಯಾವುದೇ ಪೆಟ್ಟಾಗಿರಲಿಲ್ಲ ಹಾಗೂ ಅವರು ಅಪಘಾತ ಪಡಿಸಿ ಗಾಡಿ ಬಿಟ್ಟು ಓಡಿ ಹೋದರು ಎಂದರೆ ಸರಿಯಲ್ಲ.

ಸದ್ರಿ ಸಾಕ್ಷಿಗೆ ಸರಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯ ಹೇಳಿಕೆ ಭಾಗವನ್ನು ಓದಿ ಹೇಳಿದ್ದು, ಸದ್ರಿ ಸಾಕ್ಷಿಯು ಆ ಹೇಳಿಕೆಯನ್ನು ಪೋಲಿಸರ ಮುಂದೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಸದ್ರಿ ಸಾಕ್ಷಿ ಒಪ್ಪದ ಹೇಳಿಕೆಯ ಭಾಗವಾದ " ಮೊನ್ನೆ ದಿನಾಂಕ 74-2023 ................... ತಿಳಿಯಿತು" ನ್ನು ನಿ.ಪಿ-13 ಎಂದು ಗುರುತಿಸಲಾಯಿತು. ನಾನು ದಿನಾಂಕ 21-4-2023 ರಂದು ಪೋಲಿಸರ ಮುಂದೆ ಪುನಃ ಹೇಳಿಕೆ ನೀಡಿ ಪೋಲಿಸ ಠಾಣಯಲ್ಲಿ ಅಪಘಾತ ಪಡಿಸಿದಂತಹ ಅರ್ಬನ ರಾಮಪ್ಪ ವಂಟಮೂರಿ ಹಾಗೂ ಮುತ್ತಪ್ಪ ಕಾಡಪ್ಪ ಗಸ್ತಿ ಇವರನ್ನು ನೋಡಿ ಗುರುತು ಹಿಡಿದಿದ್ದೆ ಎಂದರೆ ಸರಿಯಲ್ಲ. ಎಲ್ಲ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಎಸ್ ಎನ್ ಡಿ ವಕೀಲರಿಂದ -**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**